# Official Spokesperson's response to media queries on Indian sailors on the UAE flagged ship Rwabee seized by the Houthis

January 11, 2022

---

**ಹೌತಿಗಳು ವಶಪಡಿಸಿಕೊಂಡ ಯುಎಇ ಧ್ವಜದ ರವಾಬಿ ಹಡಗಿನಲ್ಲಿದ್ದ ಭಾರತೀಯ ನಾವಿಕರ ಕುರಿತು ಮಾಧ್ಯಮದ ಪ್ರಶ್ನೆಗಳಿಗೆ ಅಧಿಕೃತ ವಕ್ತಾರರ ಪ್ರತಿಕ್ರಿಯೆ**

ಜನವರಿ 11, 2022

**ಹೌತಿಗಳು ವಶಪಡಿಸಿಕೊಂಡಿರುವ ಯುಎಇ ಧ್ವಜದ ರವಾಬಿ ಹಡಗಿನಲ್ಲಿದ್ದ ಭಾರತೀಯ ನಾವಿಕರು ಕುರಿತು ಮಾಧ್ಯಮದ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಅಧಿಕೃತ ವಕ್ತಾರ ಶ್ರೀ ಅರಿಂದಮ್ ಬಾಗ್ಚಿ ಹೀಗೆ ಹೇಳಿದರು:**

“ಹೌತಿಗಳು ಹೊಡೆಡಾ (ಯೆಮೆನ್) ಬಂದರಿನಿಂದ ಯುಎಇ ಧ್ವಜದ ರವಾಬಿ ಹಡಗನ್ನು ಜನವರಿ 2, 2022 ರಂದು ವಶಪಡಿಸಿಕೊಂಡ ನಂತರದ ಬೆಳವಣಿಗೆಗಳನ್ನು ಭಾರತ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ನಾವು ಹಡಗನ್ನು ನಿರ್ವಹಿಸುತ್ತಿರುವ ಕಂಪನಿಯೊಂದಿಗೆ ಸಂಪರ್ಕದಲ್ಲಿದ್ದೇವೆ ಮತ್ತು ಹಡಗಿನಲ್ಲಿದ್ದ 11 ಸಿಬ್ಬಂದಿಗಳಲ್ಲಿ ಏಳು ಮಂದಿ ಭಾರತೀಯರು ಎಂದು ನಮಗೆ ತಿಳಿಸಲಾಗಿದೆ. ಎಲ್ಲಾ ಭಾರತೀಯ ಸಿಬ್ಬಂದಿ ಸದಸ್ಯರು ಸುರಕ್ಷಿತವಾಗಿದ್ದಾರೆ ಎಂದು ನಾವು ಕಂಪನಿ ಮತ್ತು ಇತರ ಮೂಲಗಳಿಂದ ಅರ್ಥಮಾಡಿಕೊಂಡಿದ್ದೇವೆ. ಭಾರತ ಸರ್ಕಾರವು ಅವರ ಶೀಘ್ರ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಸಿಬ್ಬಂದಿ ಸದಸ್ಯರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಮತ್ತು ಅವರನ್ನು ತಕ್ಷಣವೇ ಬಿಡುಗಡೆ ಮಾಡಲು ನಾವು ಹೌತಿಗಳನ್ನು ಒತ್ತಾಯಿಸುತ್ತೇವೆ. ಯೆಮೆನ್‌ನಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಹೋರಾಟದ ಬಗ್ಗೆ ಭಾರತ ಕಳವಳ ವ್ಯಕ್ತಪಡಿಸಿದೆ ಮತ್ತು ಯೆಮೆನ್ ಸಮಸ್ಯೆಗೆ ಶಾಂತಿಯುತ ಪರಿಹಾರವನ್ನು ಕಂಡುಕೊಳ್ಳಲು ಎಲ್ಲಾ ಪಕ್ಷಗಳು ಸಂಧಾನದ ಮಾತುಕತೆಗೆ ಬರುತ್ತಾರೆ ಎಂದು ಆಶಿಸುತ್ತಿದೆ.

**ನವ ದೆಹಲಿ**
**ಜನವರಿ 11, 2022**

DISCLAIMER: This is an approximate translation. The original is available in English on MEA's website and may be referred to as the official press release.